# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110

ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in


**ಸಂ. ಬಿಐಎಎಪಿಎ/ಟಿಪಿ03/ಸಿಸಿ/34/2020-21** 1266 **ದಿನಾಂಕ:** 2 4 MAR 2022

## "ಪ್ರಾರಂಭಿಕ ಪ್ರಮಾಣ ಪತ್ರ"

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೊಜನಾ ಕಾಯ್ದೆ 1961 ರ ಕಲಂ 15(1) ರನ್ವಯ)**
**(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳ 1965 ರ ನಿಯಮ 30 ನಮೂನೆ 3 ರನ್ವಯ)**

**ವಿಷಯ:** ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಸಣ್ಣೆ ಗ್ರಾಮದ ಸರ್ವೆ ನಂ. 42/2, 42/3 ಮತ್ತು 42/4 ಗಳಲ್ಲಿ ಒಟ್ಟು 2ಎಕರೆ-17ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಈ ಪ್ರಾಧಿಕಾರದಿಂದ ಅನುಮೋದಿಸಿರುವ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸದಲ್ಲಿನ ಖಾತಾ ಸಂಖ್ಯೆ: 616/42/2/42/3/42/4 (ಪಿಐಡಿ ಸಂಖ್ಯೆ 150300201901021774) ರಲ್ಲಿ 9813.49 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ "ವಸತಿ ಸಮುಚ್ಚಯ (ಸ್ಟಿಲ್ಟ್+ಜಿ+4 ಮತ್ತು 245 ವಸತಿ ಘಟಕಗಳು)" ಉಪಯೋಗದ ಕಟ್ಟಡ ಕಟ್ಟಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ.

**ಉಲ್ಲೇಖ:**
1) ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ: ಬಿಐಎಎಪಿಎ/ಟಿಪಿ03/ಎಲ್ಎಒ/ಏನಿ/44/2019-20/2326 ದಿನಾಂಕ:19/03/2020
2) ಅರ್ಜಿದಾರರ ಅರ್ಜಿ ಸಂಖ್ಯೆ ಮತ್ತು ದಿನಾಂಕ : 4824 ದಿನಾಂಕ: 22/02/2021.
3) ಈ ಪ್ರಾಧಿಕಾರದ ಸಮ ಸಂಖ್ಯೆಯ ಪತ್ರ ದಿನಾಂಕ: 21/06/2021 & 24/09/2021
4) ಪ್ರಾಧಿಕಾರಕ್ಕೆ ಶುಲ್ಕವನ್ನು ಪಾವತಿಸಿರುವ ವಿವರ : ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ 0010502 ರ ದಿನಾಂಕ : 22/07/2021 ರಂತೆ ರೂ. 26,56,500/- (ಇಪ್ಪತ್ತಾರು ಲಕ್ಷದ ಐವತ್ತಾರು ಸಾವಿರದ ಐದುನೂರು ರೂಪಾಯಿಗಳು ಮಾತ್ರ) & ರಶೀದಿ ಸಂಖ್ಯೆ: 0010687 ರ ದಿನಾಂಕ : 07/10/2021, ರಂತೆ ರೂ. 88,320/- (ಎಂಭತ್ತೆಂಟು ಸಾವಿರದ ಮುನ್ನೂರ ಇಪ್ಪತ್ತು ರೂಪಾಯಿಗಳು ಮಾತ್ರ) ರಂತೆ ಪಾವತಿಸಿರುತ್ತಾರೆ.
5) ಅರ್ಜಿದಾರರ ಮನವಿ ಪತ್ರ ದಿನಾಂಕ: 03/03/2022

******************

ಮೆ॥ ಗ್ರಿಹಮಿತ್ರ ಕನ್‌ಸ್ಟ್ರಕ್ಷನ್ಸ್ ರ ಪರವಾಗಿ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಎಸ್.ಪ್ರಸನ್ನ ಕುಮಾರ್ ಬಿನ್ ಇ.ಎಂ.ಶ್ರೀನಿವಾಸುಲು ಮತ್ತು ಶ್ರೀ ಕುಮಾರ ಗಿರಿ ರೆಡ್ಡಿಕೊಂಡ ಬಿನ್ ಲೇ॥ ರಘುರಾಮಿ ರೆಡ್ಡಿ ಕೊಂಡ (ಶ್ರೀಮತಿ ಮುನಿರತ್ನಮ್ಮ ಕೋಂ ಲೇ॥ ಚಿಕ್ಕಮುನಿಯಪ್ಪ ಮತ್ತು ಇತರರ ಪರವಾಗಿ ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು) ರವರು ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಸಣ್ಣೆ ಗ್ರಾಮದ ಸರ್ವೆ ನಂ. 42/2, 42/3 ಮತ್ತು 42/4 ಗಳಲ್ಲಿ ಒಟ್ಟು 2ಎಕರೆ-17ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಉಲ್ಲೇಖ (1) ರಂತೆ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸದಲ್ಲಿನ ಖಾತಾ ಸಂಖ್ಯೆ: 616/42/2/42/3/42/4 (ಪಿಐಡಿ ಸಂಖ್ಯೆ 150300201901021774) ರಲ್ಲಿ 9813.49 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ "ವಸತಿ ಸಮುಚ್ಚಯ (ಸ್ಟಿಲ್ಟ್+ಜಿ+4 ಮತ್ತು 245 ವಸತಿ ಘಟಕಗಳು)" ಉಪಯೋಗದ ಕಟ್ಟಡ ಕಟ್ಟಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಉಲ್ಲೇಖ (2) ರಂತೆ ಅರ್ಜಿ ಸಲ್ಲಿಸಿದ್ದು, ಉಲ್ಲೇಖ (3) ರ ಈ ಪ್ರಾಧಿಕಾರದ ಪತ್ರಗಳಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಲು, ಅಗತ್ಯ ದಾಖಲೆಗಳನ್ನು ಸಲ್ಲಿಸಲು ಮತ್ತು ಕಟ್ಟಡ ನೀಲಿ ನಕ್ಷೆಯ ಪ್ರತಿಗಳನ್ನು ಅರ್ಜಿದಾರರು/ಅಭಿಯಂತರರ ಸಹಿಗಳೊಂದಿಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಉಲ್ಲೇಖ (4) ರಂತೆ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿ, ಉಲ್ಲೇಖ (5) ರಂತೆ ಅಗತ್ಯ ದಾಖಲೆಗಳನ್ನು ಹಾಗೂ "ವಸತಿ ಸಮುಚ್ಚಯ" ಕಟ್ಟಡದ ನಕ್ಷೆಯ ನೀಲಿ ಪ್ರತಿಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ, ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಗಿನ ನಿಬಂಧನೆಗಳೊಂದಿಗೆ ನೀಡಲಾಗಿದೆ.

## ನಿಬಂಧನೆಗಳು

1. ಯೋಜಿಸಿರುವ ಕಟ್ಟಡವನ್ನು "ವಸತಿ ಸಮುಚ್ಚಯ" ಉದ್ದೇಶಕ್ಕಾಗಿಯೇ ಉಪಯೋಗಿಸಬೇಕು.
2. ಉಲ್ಲೇಖ (1) ರಂತೆ ವಸತಿ ಉಪಯೋಗದ "ಏಕ ನಿವೇಶನ ನಕ್ಷೆ" ಗೆ ಅನುಮೋದನೆ ನೀಡಿದ್ದು, ಅನುಮೋದಿತ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳನ್ನು ಅರ್ಜಿದಾರರು ತಪ್ಪದೇ ಪಾಲಿಸತಕ್ಕದ್ದು.
3. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ **ದಿನಾಂಕ: 24/03/2022 ರಿಂದ 23/03/2024 ರವರೆಗೆ** ಮಾತ್ರ ನೀಡಲಾಗಿರುತ್ತದೆ.
4. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಅಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು **ಅಣ್ಣೇಶ್ವರ ಗ್ರಾಮ** ಪಂಚಾಯ್ತಿರವರಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.
5. ಕಟ್ಟಡ ಕಟ್ಟಲು ಪರವಾನಿಗೆಯನ್ನು **ಅಣ್ಣೇಶ್ವರ ಗ್ರಾಮ** ಪಂಚಾಯ್ತಿಯಿಂದ ಪಡೆಯಬೇಕು.
6. ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ಕಟ್ಟಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.
7. "ವಸತಿ ಸಮುಚ್ಚಯ" ಉಪಯೋಗಕ್ಕೆ ಕಟ್ಟಡ ಕಟ್ಟಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ಕಟ್ಟತಕ್ಕದ್ದು.
8. ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.
9. ಕಟ್ಟಡ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.
10. ಪ್ರಸ್ತಾವನೆ ಸಂಬಂಧ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರು ದಿನಾಂಕ: 22/12/2020 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
11. ರಾಜ್ಯ ಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ – ಕರ್ನಾಟಕ ರವರ ಪತ್ರ ಸಂಖ್ಯೆ: ಎಸ್‌ಇಐಎ.51.ಸಿಓಎನ್.2021 ದಿನಾಂಕ: 01/10/2021 ರಲ್ಲಿ ವಿಧಿಸಲಾಗಿರುವ ಎಲ್ಲಾ ನಿಂಬಂಧನೆಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು ಹಾಗೂ ತಪ್ಪದೇ ಪಾಲಿಸತಕ್ಕದ್ದು.
12. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ನಂ. ಸಿಟಿಇ–330031, ಪಿಸಿಬಿ ಐಡಿ: 107736 ದಿನಾಂಕ: 25/02/2022 ರಂದು ಪಡೆದಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.
13. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರ ಪತ್ರ ಸಂಖ್ಯೆ: ಇಇಇ/ಹೆಚ್‌ಕೆಟಿಡಿ/ ಎಇಇ (ಒ)/ಎಇ–1/2021–22/1818, ದಿನಾಂಕ: 15/07/2021 ರಲ್ಲಿ ವಿಧಿಸಿರುವ ಎಲ್ಲಾ ನಿಬಂಧನೆಗಳನ್ನು ಅರ್ಜಿದಾರರು ತಪ್ಪದೇ ಪಾಲಿಸತಕ್ಕದ್ದು.
14. ಭಾರತ್ ಸಂಚಾರ್ ನಿಗಮ ಲಿಮಿಟೆಡ್ (ಬಿಎಸ್‌ಎನ್‌ಎಲ್) ಇವರ ಪತ್ರ ಸಂಖ್ಯೆ: DE/SAN/BG/NOC HRB (S-11)/2020-21/55 Dated @ BG-41, Dated: 16/11/2020 ರಲ್ಲಿ ವಿಧಿಸಿರುವ ಎಲ್ಲಾ ನಿಬಂಧನೆಗಳನ್ನು ಅರ್ಜಿದಾರರು ತಪ್ಪದೇ ಪಾಲಿಸತಕ್ಕದ್ದು.
15. ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆ ರವರ ಪತ್ರ ಸಂಖ್ಯೆ: ಕೆಎಸ್‌ಎಫ್‌ಇಎಸ್/ಜಿಬಿಸಿ(1)/107, ಡಾಕೆಟ್ ನಂ. ಕೆಎಸ್‌ಎಫ್‌ಇಎಸ್/ಎನ್‌ಒಸಿ/083/2021 ದಿನಾಂಕ:

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, **ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ**–562110

**ದೂ.** : 080–29566001, 080–27682035 **ಇಮೇಲ್** : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

23/04/2021 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.

16. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.
17. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.
18. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ನಕ್ಷೆಯು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.
19. ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.
20. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.
21. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷ ಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.
22. ಅಂತರಾಷ್ಟ್ರೀಯ ವಾಯು ನೆಲೆಯ ಪರಿಸರದಲ್ಲಿ ಬರುವುದರಿಂದ ಶಬ್ದಮಾಲಿನ್ಯ ಸಹಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.
23. ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಸಹ ಪಡೆಯತಕ್ಕದ್ದು.
24. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಫೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರವು ತಂತಾನೆ ರದ್ದಾಗುತ್ತದೆ.

24.3.22

**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

*ಇವರಿಗೆ:*

**ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು,**
ಅಣ್ಣೇಶ್ವರ ಗ್ರಾಮ ಪಂಚಾಯ್ತಿ,
ದೇವನಹಳ್ಳಿ ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ.
} ಕಟ್ಟಡ ನಕ್ಷೆಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

ಪ್ರತಿಯನ್ನು:

1. **ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ,** ನಂ. 1/14, 2 ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ ಕಾಂಪೌಂಡ್, 3 ನೇ ಕ್ರಾಸ್ ಮಿಷನ್ ರಸ್ತೆ, ಬೆಂಗಳೂರು–560027 ಇವರ ಮಾಹಿತಿಗಾಗಿ ಕಳುಹಿಸಿದೆ
2. **ಮೆ॥ ಗ್ರಿಹಮಿತ್ರ ಕನ್‌ಸ್ಟ್ರಕ್ಷನ್ಸ್ ರ ಪರವಾಗಿ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಎಸ್.ಪ್ರಸನ್ನ ಕುಮಾರ್ ಬಿನ್ ಇ.ಎಂ.ಶ್ರೀನಿವಾಸುಲು ಮತ್ತು ಶ್ರೀ ಕುಮಾರ ಗಿರಿ ರೆಡ್ಡಿಕೊಂಡ ಬಿನ್ ಲೇ॥ ರಘುರಾಮಿ ರೆಡ್ಡಿ ಕೊಂಡ (ಶ್ರೀಮತಿ ಮುನಿರತ್ನಮ್ಮ ಕೋಂ ಲೇ॥ ಚಿಕ್ಕಮುನಿಯಪ್ಪ ಮತ್ತು ಇತರರ ಪರವಾಗಿ ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು),** ನಂ.226/40/1ಎ, 1ನೇ ಮುಖ್ಯ ರಸ್ತೆ, ಕೆಂಚೇನಹಳ್ಳಿ, ರಾಜರಾಜೇಶ್ವರಿನಗರ, ಬೆಂಗಳೂರು– 560098 ರವರ ಮಾಹಿತಿಗಾಗಿ.
3. **ಕಛೇರಿ ಪ್ರತಿ.**